# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/90/14-15 ದಿನಾಂಕ :05-08-2016

ಉಪಸ್ಥಿತರು: **ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)**

**ಸಹಾಯಕ ಆಯುಕ್ತರು, ಬಳ್ಳಾರಿ.**

| ವಾದಿಗಳು | ಪ್ರತಿವಾದಿಗಳು |
|---|---|
| 1)ಶ್ರೀ ಮಣ್ಣೂರು ಈರಣ್ಣ ತಂದೆ ಎಂ ಮುದಿಯಪ್ಪ ಬಾದನಹಟ್ಟಿ ಗ್ರಾಮ ಬಳ್ಳಾರಿ ತಾಲೂಕು<br><br>**(ಶ್ರೀ ಜಿ ವೀರೇಶ ವಕೀಲರು ಬಳ್ಳಾರಿ)** | 1)ವಿಶೇಷ ತಹಶೀಲ್ದಾರರು ಕುರುಗೋಡು<br>2)ಕಂದಾಯ ನಿರೀಕ್ಷಕರು ಕುರುಗೋಡು<br>3)ಶ್ರೀ ರಾಮಪ್ಪ ತಂದೆ ಆಸುಂಡಿ ಮಲ್ಲಪ್ಪ ಇವರ ವಾರಸುದಾರರು<br>4(1)ಬಸಪ್ಪ ತಂದೆ ರಾಮಪ್ಪ<br>5)ಶ್ರೀ ಹನುಮಂತಪ್ಪ ತಂದೆ ಬಾವಿಕಟ್ಟಿ ಈರಪ್ಪ<br>ಬಾದನಹಟ್ಟಿ ಗ್ರಾಮ ಬಳ್ಳಾರಿ ತಾಲೂಕು |

**ದಾವಾ ಜಮೀನಿನ ವಿವರ :-**

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಕುರುಗೋಡು | 557 ಪೈಕಿ | 2.00 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಕುರುಗೋಡು ಇವರ ಎಂ ಆರ್ ನಂ H107/84-85 ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 10-04-2015, 11-12-2015, ಮತ್ತು 05-08-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳ ಪರ ವಕೀಲರು ದಿನಾಂಕ: 05-08-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಕುರುಗೋಡು ಗ್ರಾಮದ ಸ.ನಂ 557 ಪೈಕಿ ವಿಸ್ತೀರ್ಣ: 2.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಕುರುಗೋಡು ಇವರ ಎಂ ಆರ್ ನಂ H107/84/85 ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತಾರೆ. ಮುಂದುವರೆದು ಮೇಲ್ಮನವಿಯಲ್ಲಿನ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ಜಮೀನನ್ನು ನೊಂದಾಯಿತ ಕ್ರಯ ಪತ್ರ 48/67-68 ದಿನಾಂಕ 06-04-1967 ರಂದು ಖರೀದಿಸಿದ್ದು ಕ್ರಯ ಪತ್ರದನ್ವಯ ಹಕ್ಕುಬದಲಾವಣೆಮಾಡಿ ಮಾಡಿಕೊಡುವಂತೆ ಕೋರಿರುತ್ತಾರೆ.

ಮುಂದುವರೆದು ಪರಿಶೀಲಿಸಲಾಗಿ ಪ್ರತಿವಾದಿಗಳಿಗೆ ಈ ನ್ಯಾಯಾಲಯದಿಂದ ಸಲ್ಲಿಸಿದ ನೋಟೀಸ್ ಪ್ರತಿಯು ವಿಳಾಸ ಸರಿಯಿಲ್ಲದ ಕಾರಣ ಪ್ರತಿವಾದಿಗೆ ಜಾರಿಯಾಗದೆ, ಈ ನ್ಯಾಯಾಲಯಕ್ಕೆ ಹಿಂದಿರುಗಿರುತ್ತದೆ. ಕಾರಣ ಎದರುದಾರರ ಸೂಕ್ತ ವಿಳಾಸದೊಂದಿಗೆ ಮೇಲ್ಮನವಿ ಸಲ್ಲಿಸುವ ಅವಕಾಶವನ್ನು ಮುಕ್ತವಾಗಿಟ್ಟು ಸದರಿ ಮೇಲ್ಮನವಿಯನ್ನು ಮುಕ್ತಾಯ ಗೋಳಿಸುವ ಈ ಕೆಳಕಂಡ ಆದೇಶ.

**:: ಆದೇಶ ::**

**ಮೇಲ್ಮನವಿಯನ್ನು ತಿರಸ್ಕರಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಕುರುಗೋಡು ಗ್ರಾಮದ ಸ.ನಂ 557 ಪೈಕಿ ವಿಸ್ತೀರ್ಣ: 2.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಮೇಲ್ಮನವಿಯನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸುತ್ತಾ; ವಜಾ ಮಾಡಿ ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ, ತಪ್ಪುಗಳನ್ನು ತಿದ್ದಿ **ದಿನಾಂಕ: 05-08-2016** ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು

**ಸಹಾಯಕ ಆಯುಕ್ತರು,**
**ಬಳ್ಳಾರಿ.**

**ಪ್ರತಿಯನ್ನು ವಾದಿಗಳಿಗೆ, ಹಾಗೂ ತಹಶೀಲ್ದಾರರು ಬಳ್ಳಾರಿ ಇವರಿಗೆ**

ರವಾನಿಸಲಾಗಿದೆ.
14/9/16